

ರಾಜಕುಮಾರ ಹೋಗಿ ಕುದುರೆಯನ್ನು ನೋಡಿದನು. ಅದು ತುಂಬಾ ಸುಂದರವಾಗಿತ್ತು. ನರಿಯ ಮಾತಿನಂತೆ ಕುದುರೆಗೆ ಚರ್ಮದ ಜೀನನ್ನು ಹಾಕಿ ಹೊರಗೆ ತರಲು ಮನಸ್ಸು ಒಪ್ಪಲಿಲ್ಲ. ಅವನು ಬಂಗಾರದ ಜೀನನ್ನು ತೊಡಿಸಿ ಹೊರಗೆ ಕರೆದುಕೊಂಡು ಬಂದನು. ಆಗ ಕುದುರೆಯು ಕೆನೆಯಲಾರಂಭಿಸಿತು. ಅಲ್ಲಿನ ಸೈನಿಕರು ರಾಜಕುಮಾರನನ್ನು ಆ ರಾಜ್ಯದ ರಾಜನ ಬಳಿಗೆ ಕರೆದುಕೊಂಡು ಹೋದರು. ರಾಜಕುಮಾರನು ರಾಜನಲ್ಲಿ ಇರುವ ವಿಷಯಗಳನ್ನು ತಿಳಿಸಿದನು. ಆಗ ರಾಜನು 'ನೀನು ಸುವರ್ಣ ಕೋಟೆಯೊಳಗೆ ಚಿನ್ನದ ಕೂದಲನ್ನು ಹೊಂದಿರುವ ಹುಡುಗಿಯನ್ನು ನನಗೆ ತಂದು ಒಪ್ಪಿಸಿದರೆ, ನಾನು ನಿನಗೆ ಈ ಕುದುರೆಯನ್ನು ಕೊಡುತ್ತೇನೆ' ಎಂದನು.

ಆತ ರಾಜನ ಮಾತಿಗೆ ಸಮ್ಮತಿ ಸೂಚಿಸಿ ಕೋಟೆಯಿಂದ ಹೊರಬಂದು ನರಿಗೆ ವಿಷಯವನ್ನು ತಿಳಿಸಿದನು. ನರಿ ಅವನ ತಪ್ಪುಗಳನ್ನು ಕ್ಷಮಿಸಿ ಚಿನ್ನದ ಕೂದಲಿರುವ ರಾಜಕುಮಾರಿ ವಾಸಿಸುವ ಕೋಟೆಯ ಬಳಿಗೆ ಕರೆದುಕೊಂಡು ಹೋಯಿತು. ಅದು ಕಪ್ಪು ಸಮುದ್ರದ ನಡುವೆಯಿತ್ತು. ಆ ಕೋಟೆ ಸಮುದ್ರದ ರಾಣಿಗೆ ಸೇರಿತ್ತು. ನರಿಯು ರಾಜಕುಮಾರನಲ್ಲಿ 'ನೀನು ಅರಮನೆಯೊಳಗೆ ಹೋದಾಗ ಅಲ್ಲಿ ನಿನಗೆ ಮಹಾರಾಣಿ ಎದುರಾಗುತ್ತಾಳೆ. ನೀನು ಅವಳಿಗೆ ನಮಸ್ಕರಿಸು. ನೀನು ಬಂದ ವಿಷಯ ತಿಳಿಸು. ಅವಳಿಗೆ ಮೂವರು ರಾಜಕುಮಾರಿಯರು. ಅವರಲ್ಲಿ ಒಬ್ಬರನ್ನು ನಿನಗೆ ಆರಿಸಿಕೊಳ್ಳಲು ತಿಳಿಸುತ್ತಾಳೆ. ಮೂವರು ರೂಪವಂತರು. ಮೂವರ ತಲೆಯನ್ನು ವಸ್ತ್ರದಿಂದ ಮುಚ್ಚಲಾಗಿರುತ್ತದೆ. ಮೊದಲನೆಯವಳು ಬಂಗಾರದ ವಸ್ತ್ರವನ್ನು, ಎರಡನೆಯವಳು ಬೆಳ್ಳಿಯ, ಮೂರನೆಯವಳು ಸಾಧಾರಣದ ವಸ್ತ್ರ ಹಾಕಿರುತ್ತಾರೆ. ನೀನು ಸಾಧಾರಣ ವಸ್ತ್ರ ತೊಟ್ಟ ಕುವರಿಯನ್ನು ಆರಿಸಿಕೊಂಡು ಬರಬೇಕು' ಎಂದಿತು.

ನರಿ ತಿಳಿಸಿದಂತೆ ರಾಜಕುಮಾರನು ಸಾಧಾರಣ ವಸ್ತ್ರ ತೊಟ್ಟ ರಾಜಕುಮಾರಿಯನ್ನೇ ಆರಿಸಿಕೊಂಡು ಬಂದನು. ಆಗ ನರಿಯು ರಾಜಕುಮಾರಿಯ ವೇಷದಲ್ಲಿ ಬದಲಾಗಿ ರಾಜಕುಮಾರನಲ್ಲಿ 'ನೀನು ನಿಜವಾದ ರಾಜಕುಮಾರಿಯನ್ನು ಬಚ್ಚಿಟ್ಟು ನನ್ನನ್ನು ರಾಜನಿಗೆ ಒಪ್ಪಿಸು. ನಂತರ ನೀನು ಬಂಗಾರದ ಜುಟ್ಟಿರುವ ಕುದುರೆಯನ್ನು ತೆಗೆದುಕೊಂಡು ಅಲ್ಲಿಂದ ಹೋಗು' ಎಂದಿತು.

ರಾಜನಿಗೆ ಕುಮಾರಿಯ ಸೌಂದರ್ಯ ನೋಡಿ ಸಂತೋಷವಾಯಿತು. ಅವನು ಆಡಿದ ಮಾತಿನಂತೆ ರಾಜಕುಮಾರನಿಗೆ ಬಂಗಾರದ ಕುದುರೆಯನ್ನು ಕೊಟ್ಟು ಕಳುಹಿಸಿದನು. ರಾಜನು ತನ್ನ ಮಿತ್ರರನ್ನು ಕರೆದು ರಾಜಕುಮಾರಿಯ ಸೌಂದರ್ಯವನ್ನು ವರ್ಣಿಸಲು ತಿಳಿಸಿದಾಗ, ಅಲ್ಲಿದ್ದವರೆಲ್ಲ ಒಂದೊಂದು ರೀತಿಯಲ್ಲಿ ಹೊಗಳುತ್ತಿರಲು ಅವರಲ್ಲೊಬ್ಬ ಮಾತ್ರ 'ರಾಜಕುಮಾರಿಯ ಕಣ್ಣುಗಳು ಏಕೋ ನರಿಯ ಕಣ್ಣಿನಂತಿವೆ' ಎಂದನು. ಅವನು ಅಷ್ಟು ಹೇಳಿದ್ದೆ ತಡ ರಾಜಕುಮಾರಿಯಂತಿದ್ದವಳು ನರಿಯಾಗಿ ಪರಿವರ್ತನೆಯಾಯಿತು.ನರಿಯು ಜೀವ ಭಯದಿಂದ ಅವರ ಕೈಗೆ ಸಿಗದೆ ಅಲ್ಲಿಂದ ಓಡಿ ಹೋಯಿತು.

ನರಿಯು ಈಗ ಕುದುರೆಯಾಗಿ ಬದಲಾಗಿ ರಾಜಕುಮಾರನಿಗೆ ಸಹಾಯ ಮಾಡಲು ವೇಷ ಬದಲಾಯಿಸಿತು. ಬಂಗಾರದ ಜುಟ್ಟಿನ ಕುದುರೆಯನ್ನು ತಂದುಕೊಡಬೇಕೆಂದು ಹೇಳಿದ ರಾಜನ ಅರಮನೆಗೆ ತನ್ನನ್ನು ಬಿಡು ಎಂದು ನರಿಯು ರಾಜಕುಮಾರನಲ್ಲಿ ಕೇಳಿತು. ಕುದುರೆಯ ವೇಷದಲ್ಲಿದ್ದ ನರಿಯನ್ನು ರಾಜನ ಬಳಿಗೆ ಬಿಟ್ಟು, ರಾಜಕುಮಾರನು ಅವನಿಂದ ಹಕ್ಕಿಯನ್ನು ಪಡೆದು ಅಲ್ಲಿಂದ ಹೊರಟನು. ರಾಜನಿಗೆ ಕುದುರೆಯ ಅಂದಚಂದ ಕಂಡು ಸಂತೋಷವಾಗಿ ತನ್ನ ಸ್ನೇಹಿತರನ್ನು ಕರೆದು ಕುದುರೆ ಹೇಗಿದೆಯೆಂದು ಕೇಳಿದನು. ಆಗ ರಾಜನ ಸ್ನೇಹಿತನೊಬ್ಬ 'ಕುದುರೆಯ ಕಣ್ಣುಗಳು ನರಿಯ ಕಣ್ಣಿನಂತಿವೆ' ಎಂದನು. ಆಗ ಕುದುರೆಯ ರೂಪದಲ್ಲಿದ್ದ ನರಿಯು ತನ್ನ ನಿಜ ರೂಪಕ್ಕೆ ಬಂದಿತು. ಜೀವ ಭಯದಿಂದ ಅಲ್ಲಿಂದ ಓಡಿ ರಾಜಕುಮಾರನ ಬಳಿಗೆ ಬಂದಿತು.

ನರಿಯು ರಾಜಕುಮಾರನಲ್ಲಿ 'ನೀನು ಕೂಡಲೇ ರಾಜಕುಮಾರಿ ಮತ್ತು ಬಂಗಾರದ ಹಕ್ಕಿಯೊಂದಿಗೆ ನೇರವಾಗಿ ಅರಮನೆಗೆ ಹೋಗು. ಎಲ್ಲಿಯೂ ನಿಲ್ಲಬೇಡ' ಎಂದಿತು. ನರಿಯ ಮಾತಿನಂತೆ ರಾಜಕುಮಾರನು ಅರಮನೆಯ ದಾರಿಯನ್ನು ಹಿಡಿದನು. ಅದೇ ದಾರಿಯಲ್ಲಿ ಬರಬೇಕಾದರೆ ತನ್ನ ಸಹೋದರರ ನೆನಪು ಅವನಿಗೆ ಬಂದಿತು. ಒಪ್ಪಂದ ಪ್ರಕಾರ ಒಂದು ವರ್ಷದ ನಂತರ ತಾವು ಮೂವರು ಸೇರಬೇಕಾದ ಜಾಗವನ್ನು ತಲುಪಿ ತನ್ನ ಸಹೋದರರ ಬರುವಿಕೆಗೆ ಕಾದು ಕುಳಿತನು. ಅವನ ಸಹೋದರರು ಮಾರನೇ ದಿನ ಆ ಜಾಗಕ್ಕೆ ಬಂದು ಕಿರಿಯ ರಾಜಕುಮಾರನನ್ನು ಭೇಟಿಯಾದರು. ತಮ್ಮನ ಸಾಹಸವನ್ನು ಕಂಡು ಅವರಿಬ್ಬರಿಗೂ ಹೊಟ್ಟೆಕಿಚ್ಚಾಯಿತು. ತಮ್ಮನನ್ನು ಕೊಂದು ಅವರು ರಾಜಕುಮಾರಿ ಮತ್ತು ಹಕ್ಕಿಯೊಂದಿಗೆ ಅರಮನೆಗೆ ಹೋದರು. ಅರಮನೆಯಲ್ಲಿ ತಂದೆಗೆ ರಾಜಕುಮಾರಿ ಮತ್ತು ಹಕ್ಕಿಯನ್ನು ತೋರಿಸಿ, ಇವರನ್ನು ತರಲು ಏನೆಲ್ಲಾ ಸಾಹಸವನ್ನು ಮಾಡಬೇಕಾಯಿತೆಂದು ಸುಳ್ಳಿನ ಸರಮಾಲೆಯನ್ನು ಕಟ್ಟಿ ಹೇಳಿದರು. ಆದರೆ ರಾಜಕುಮಾರಿ ಕಿರಿಯ ರಾಜಕುಮಾರನ ನೆನಪಿನಿಂದ ಏನ್ನನ್ನೂ ತಿನ್ನುತ್ತಿರಲಿಲ್ಲ. ಹಕ್ಕಿಯೂ ಹಾಡನ್ನು ಹೇಳದೆ ಕಿರಿಯ ರಾಜಕುಮಾರನ ಬರುವಿಕೆಗಾಗಿ ಕಾಯುತ್ತಿತ್ತು.

ನರಿಯು ಊರೆಲ್ಲಾ ಅಲೆಯುತ್ತಾ ಕಿರಿಯ ರಾಜಕುಮಾರನು ಕೊಲೆಯಾದ ಜಾಗಕ್ಕೆ ಬಂದಿತು. ಆ ಜಾಗದಲ್ಲಿ ನಡೆದ ಘಟನೆಗಳು ನರಿಗೆ ಅರ್ಥವಾಯಿತು. ರಾಜಕುಮಾರನ ಮೃತ ದೇಹವನ್ನು ನೋಡಿ ಅವನನ್ನು ಪುನಃ ಬದುಕಿಸಬೇಕೆಂದು ತೀರ್ಮಾನ ಮಾಡಿತು. ಅಲ್ಲಿಯೇ ಒಂದು ಕಾಗೆಯು ಕುಳಿತಿತ್ತು. ಕಾಗೆಯಲ್ಲಿ ನೀರನ್ನು ತಂದು ಕೊಡು ಎಂದು ಕೇಳಿತು. ನರಿಗೆ ಕಾಗೆಯು ನೀರನ್ನು ತಂದು ಕೊಟ್ಟಿತು. ನರಿಯು ರಾಜಕುಮಾರನ ಮೈಮುಖದ ಮೇಲೆ ನೀರನ್ನು ಹಾಕಿತು. ರಾಜಕುಮಾರನು ಎಚ್ಚರಗೊಂಡನು. ಅವನು ನರಿಗೆ ನಡೆದ ವಿಷಯವೆಲ್ಲವನ್ನೂ ತಿಳಿಸಿದನು. ತಮ್ಮಂದಿರು ತನಗೆ ದ್ರೋಹವನ್ನು ಮಾಡಿ ರಾಜಕುಮಾರಿ ಮತ್ತು ಹಕ್ಕಿಯನ್ನು ಅರಮನೆಗೆ ತೆಗೆದುಕೊಂಡು ಹೋದ ರೀತಿಯನ್ನು ನರಿಗೆ ತಿಳಿಸಿದನು. ಆಗ ನರಿಯು ರಾಜಕುಮಾರನಿಗೆ 'ನೀನು ಈಗ ಅರಮನೆಗೆ ಸಾಧಾರಣ ವೇಷದಲ್ಲಿ ಹೋಗು. ನೀನು ಯಾರೆಂದು ಅಲ್ಲಿ ಯಾರಿಗೂ ತಿಳಿಯಬಾರದು' ಎಂದಿತು.

ರಾಜಕುಮಾರನು ನರಿಯ ಮಾತಿನಂತೆ ಸಾಧಾರಣ ವೇಷದಲ್ಲಿ ಅರಮನೆಗೆ ಹೋದನು. ಅವನು ನೇರವಾಗಿ ಬಂಗಾರದ ಹಕ್ಕಿಯಿದ್ದ ಸ್ಥಳಕ್ಕೆ ಬಂದನು. ಆಗ ಹಕ್ಕಿಯು ರಾಜಕುಮಾರನನ್ನು ನೋಡಿ ಹಾಡಲು ಪ್ರಾರಂಭ ಮಾಡಿತು. ರಾಜಕುಮಾರಿಯು ಅವನನ್ನು ನೋಡಿ ಸಂತೋಷಪಟ್ಟಳು. ರಾಜಕುಮಾರನು ಹಕ್ಕಿ ಮತ್ತು ರಾಜಕುಮಾರಿಯೊಂದಿಗೆ ತನ್ನ ತಂದೆಯ ಬಳಿಗೆ ತೆರಳಿದನು. ಹಕ್ಕಿಯು ಸಂತೋಷದಿಂದ ರಾಜನ ಮುಂದೆ ಹಾಡಿತು. ರಾಜನಿಗಿದ್ದ ರೋಗಗಳು ಗುಣವಾದವು. ತನ್ನ ತಂದೆಯಲ್ಲಿ ಕಿರಿಯ ರಾಜಕುಮಾರ ನಡೆದ ಘಟನೆಗಳನ್ನು ತಿಳಿಸಿದ. ಆಗ ರಾಜನು ಸುಳ್ಳನ್ನು ಹೇಳಿದ್ದ ತನ್ನಿಬ್ಬರು ರಾಜಕುಮಾರರಿಗೆ ಕಠಿಣ ಶಿಕ್ಷೆಯನ್ನು ವಿಧಿಸಿದನು. ನಂತರ ಕಿರಿಯ ರಾಜಕುಮಾರನಿಗೆ ಬಂಗಾರದ ಕೂದಲಿರುವ ರಾಜಕುಮಾರಿಯೊಂದಿಗೆ ಮದುವೆಯನ್ನು ಮಾಡಿಸಿ, ಅವನಿಗೆ ತನ್ನ ರಾಜ್ಯಭಾರವನ್ನು ಒಪ್ಪಿಸಿದನು.

★ ಮೂರನೇ ಜಾವ= ಕೋಳಿ ಕೂಗುವ ಹೊತ್ತು, ಸುಮಾರು 5ಗಂಟೆ.